ಇ) ಹಾಗಿದ್ದಲ್ಲಿ, ದಿನಗೂಲಿಯನ್ನು ಪುನರ್ ವಿಮರ್ಶಿಸಿ ೮-೨೫ ರೂ. ಮಾಡಿರುವಾಗ ಗ್ರಾಮ ಸಹಾಯಕರಿಗೆ ದಿನಕ್ಕೆ ೩-೩೩ ರೂ. ಕೊಡುತ್ತಿರುವುದು ನಿಜವೆ?

ಈ) ಗ್ರಾಮ ಸಹಾಯಕರ ಸಂಬಳವನ್ನು ಪುನರ್ ವಿಮರ್ಶಿಸಿ ಅವರಿಗೆ ಕನಿಷ್ಟ ಸಂಬಳ ೩೦೦ ರೂ.ಗಳನ್ನು ಮಾಡಲು ಸರಕಾರದವರು ಯೋಚನೆ ಮಾಡುವರೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೧೦,೪೫೦.

ಆ) **ಗ್ರಾಮ ಸಹಾಯಕರಿಗೆ ತಿಂಗಳಿಗೆ ೧೨೦–ರೂಪಾಯಿಗಳ ನಿಗಧಿತ ಸಂಭಾವನೆ ಪಾವತಿ** ಮಾಡಲಾಗುತ್ತಿದೆ. ಈ ಸಂಭಾವನೆ ಸಾಕಾಗುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) **ಗ್ರಾಮ ಸಹಾಯಕರಿಗೆ ೩–೩೩ ರೂ. ದಿನಗೂಲಿಯನ್ನು ಕೊಡುತ್ತಿರುವುದು ನಿಜವಲ್ಲ.**

ಈ) ಗ್ರಾಮ ಸಹಾಯಕರ ಸಂಭಾವನೆಯನ್ನು ದಿನಾಂಕ ೧—೧—೮೬ ರಿಂದ ತಿಂಗಳಿಗೆ ರೂ. ೧೨೦–೦೦ ರಿಂದ ರೂ. ೧೫೦-೦೦ಕ್ಕೆ ಹೆಚ್ಚಿಸಲು ನಿರ್ಧರಿಸಿದೆ.

ರಾಜ್ಯದಲ್ಲಿ ಖಾಸಗೀ ಶಾಲಾ ಕಾಲೇಜುಗಳಿಗೆ ಜಮೀನು ಖರೀದಿಸುವ ಬಗ್ಗೆ

೧೧೬೯. **ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).**—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು **ಈ ಕೆಳಕಂಡ ಪ್ರಶ್ನೆಗಳಿಗೆ** ದಯವಿಟ್ಟು ಉತ್ತರಿಸುವರೇ ?

ಅ) **ರಾಜ್ಯದಲ್ಲಿ ಖಾಸಗಿ ಸಂಘ ಸಂಸ್ಥೆಗಳಿಗೆ ಜಮೀನು ಖರೀದಿಸುವ ಹಕ್ಕು ಇರುವುದೆ,**

ಆ) ಹಾಗಿದ್ದಲ್ಲಿ ಸದರಿ ಸಂಸ್ಥೆಗಳಿಗೆ ಹೊಸದಾಗಿ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಲು ಸ್ಥಳಗಳನ್ನು ಸರ್ಕಾರದವರೇನಾದರೂ ಹರಾಜಿನ ಮುಖಾಂತರ ನೀಡಲು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ವ್ಯವಸಾಯ ಯೋಗ್ಯವಲ್ಲದ ಭೂಮಿಯನ್ನು ಖರೀದಿಸಲು ಯಾವ ನಿರ್ಬಂಧನೆಯೂ ಇಲ್ಲ.

ಆ) **ಪ್ರಶ್ನೆ ಉದ್ಭವಿಸುವುದಿಲ್ಲ.**

ಡಿ.ಸಿ.ಸಿ. ಬ್ಯಾಂಕುಗಳಿಗೆ ಚುನಾವಣೆ

೪೫೦. **ಶ್ರೀ ಜಿ.ಎಸ್. ಆಚಾರ್** (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು **ಈ ಕೆಳಕಂಡ** ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) **ಈಚಿನ ಮೂರು ವರ್ಷಗಳಲ್ಲಿ ರಾಜ್ಯದ ಎಷ್ಟು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ** ಆಡಳಿತ ಮಂಡಳಿಗಳನ್ನು ರದ್ದು ಗೊಳಿಸಿ ವಿಶೇಷಾಧಿಕಾರಿಗಳನ್ನು ನೇಮಿಸಲಾಯಿತು?

ಆ) ಅವುಗಳಲ್ಲಿ ಎಷ್ಟು ಬ್ಯಾಂಕುಗಳಿಗೆ **ಚುನಾವಣೆ** ನಡೆದು ಚುನಾವಣೆ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದಿವೆ?

ಇ) ಉಳಿದವುಗಳಿಗೆ ಯಾವಾಗ ಚುನಾವಣೆ ಜರುಗುತ್ತದೆ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಕಳೆದ ಮೂರು ವರ್ಷಗಳಲ್ಲಿ ೫ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಿಸಲಾಯಿತು.

ಆ) ಎರಡು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಚುನಾವಣೆ ನಡೆದು **ಹೊಸ ಆಡಳಿತ** ಮಂಡಳಿಯು ಅಸ್ತಿತ್ವಕ್ಕೆ ಬಂದಿದೆ.

ಇ) ಉಳಿದ **ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಚುನಾವಣೆ** ನಡೆಸುವ ವಿಷಯವು **ಸರಕಾರದ ಗಮನದಲ್ಲಿದೆ.**